


# ರೆಂಬೆಯಲ್ಲಿ ಪುಟಾಣಿ ಬುದ್ಧ..



ಮನುಷ್ಯನ ಕೈಗೆ ಏನು ಸಿಕ್ಕರೂ ಕಲಾಕೃತಿಗಳಾಗಿ ಬಿಡುತ್ತವೆ. ಕಲ್ಲು, ಮಣ್ಣು, ಮರ, ಮರಳು, ಸಿಮೆಂಟ್, ತರಕಾರಿ, ಹಣ್ಣು.. ಹೀಗೆ ಕ್ಷಣಾರ್ಧದಲ್ಲಿ ಕಲೆಯಾಗಿ ಅರಳಿ ಮನೆಯ ಷೋಕೇಸ್‌ನಲ್ಲೋ, ಮೇಜಿನ ಮೇಲೋ ಮುಗುಳ್ನಗುತ್ತವೆ. ಆದರೆ ಕಚ್ಚಾವಸ್ತುವನ್ನು ಕೈಗಳಿಂದ, ಟೂಲ್‌ಗಳಿಂದ ಕೆತ್ತಿ ಕಲಾಕೃತಿಗಳನ್ನಾಗಿ ಮಾಡುವುದಕ್ಕಿಂತ ಅದನ್ನೇ ಬೆಳೆದುಬಿಟ್ಟರೆ...

ಜಪಾನಿನ ರೈತರ ತಲೆಗೆ ಹೊಳೆದಿದ್ದು ಈ ಉಪಾಯವೇ. ಕಲ್ಲಂಗಡಿ ಹಣ್ಣಿನ ಅಂಡಾಕಾರವನ್ನು ಬದಲಾಯಿಸಿ ಚಚ್ಚೌಕ ಕಲ್ಲಂಗಡಿ ಬೆಳೆದು ಭರ್ಜರಿ ಹಣ ಮಾಡಿದರು. ಜಪಾನ್ ರೈತರಿಗಿಂತ ತಾನೇನು ಕಡಿಮೆ ಎಂದು ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಚೀನಾದ ರೈತ ಗಾವೊ ಶಿಯಾಂಝಾಂಗ್ ಬೇಬಿ ಬುದ್ಧನಾಕಾರದ ಮರಸೇಬು (ಪೇರ್ಸ್)ಗಳನ್ನು ಬೆಳೆದಿದ್ದಾನೆ.

ಉತ್ತರ ಚೀನಾದ ಹೇಶಿಯಾ ಗ್ರಾಮದ ಈ ರೈತನ ತೋಟದಲ್ಲಿರುವ ಮರದ ತುಂಬ ಜೋಲಾಡುವ 'ಬೇಬಿ ಬುದ್ಧ'ನ ಆಕಾರದ ಮರಸೇಬುಗಳು. ಆರು ವರ್ಷಗಳ ಕಾಲ ಶ್ರಮ ವಹಿಸಿದ ಗಾವೊ ಪ್ಲಾಸ್ಟಿಕ್‌ನಲ್ಲಿ ಬುದ್ಧನಾಕಾರದ ಅಚ್ಚುಗಳನ್ನು ತಯಾರಿಸಿದ. ಪ್ರತಿಯೊಂದು ಹೀಚಿಗೂ ಈ ಅಚ್ಚುಗಳನ್ನು ಕಟ್ಟಿದ. ಒಂದೆರಡಲ್ಲ, 10 ಸಾವಿರ ಪುಟಾಣಿ ಬುದ್ಧರನ್ನು ಬೆಳೆದು ಲಂಡನ್ ಮಾರುಕಟ್ಟೆಗೂ ಕಳಿಸಿದ್ದಾನೆ. ಒಂದು ಮರಸೇಬಿಗೆ 5 ಪೌಂಡ್ ಬೆಲೆ. ಹೇಗಿದೆ ಗಾವೊ ತಲೆ– ಕಲೆ!

–ರಾಘು

